**ಎರಡನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಭದ್ರಾವತಿ**

ಸಿಸಿ ಸಂಖ್ಯೆ 10738/2025

**ಪಿರ್ಯಾದುದಾರರುಃ** ಹಳೆ ನಗರ ಪೋಲೀಸ್ ಠಾಣೆ , ಭದ್ರಾವತಿ.

ವಿರುದ್ಧ

**ಆರೋಪಿಃ** ಸುರಜ್ ಬಿನ್ ಶ್ರೀಧರ, ವಯಸ್ಸು 20 ವರ್ಷ,
ವಾಸಃ ಶನೇಶ್ವರ ದೇವಸ್ಥಾನದ ಹತ್ತಿರ, ಭೂತನಗುಡಿ,
ಭದ್ರಾವತಿ ಟೌನ್.

**ಆಪಾದನೆ ಸಾರಾಂಶ**

ದಿನಾಂಕಃ 15.12.2025 ರಂದು ಸಂಜೆ 5..30 ರ ಸಮಯದಲ್ಲಿ, ಆರೋಪಿಯಾದ ನೀವು ಭದ್ರಾವತಿ ಹಳೇನಗರ ಪೋಲೀಸ್ ಠಾಣಾ ವ್ಯಾಪ್ತಿ ನಗರಸಭೆ ಎದುರುಗಡೆಯ ಪಾರ್ಕ್ ಹತ್ತಿರ ಗಾಂಜಾ ಸೇವನೆ ಮಾಡಿದಂತೆ ಕಂಡು ಬಂದಿದ್ದು, ಹಳೇ ನಗರ ಪೋಲೀಸರು ನಿಮ್ಮನ್ನು ವಶಕ್ಕೆ ಪಡೆದು ವೈದ್ಯಕೀಯ ತಪಾಸಣೆಗೊಳಪಡಿಸಿದಾಗ ನೀವು ಮಾದಕ ವಸ್ತು ಗಾಂಜವನ್ನು ಸೇವನೆ ಮಾಡಿರುವುದು ದೃಢಪಟ್ಟಿರುತ್ತದೆ. ಆದ್ದರಿಂದ ಆರೋಪಿಯಾದ ನೀವು ಎನ್‌ಡಿಪಿಎಸ್ ಕಾಯ್ದೆಯ ಕಲಂ 27(ಬಿ) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾದ ಮಾಡಿರುತ್ತೀರಾ ಎಂದು ಆರೋಪಿಸಲಾಗಿದೆ.

ಪ್ರಶ್ನೆ 1: ಈಗ ಓದಿ ತಿಳಿಸಿ ಹೇಳಲಾದ ನಿಮ್ಮ ಮೇಲಿನ ಆಪಾದನೆ ತಿಳಿಯಿತೇ?

ಉತ್ತರಃ ತಿಳಿಯಿತು.

ಪ್ರಶ್ನೆ 2: ಆಪಾದನೆಯನ್ನು ಒಪ್ಪುವಿರೋ ಅಥವಾ ವಿಚಾರಣೆ ಆಗಲು ಬಯಸುವಿರೋ?

ಉತ್ತರಃ ಆಪಾದನೆಯನ್ನು ಒಪ್ಪುತ್ತೇನೆ.

(ಮೇಲ್ಕಂಡಂತೆ ಆಪಾದನೆಯನ್ನು ಆಪಾದಿತನಿಗೆ ತಿಳಿದ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರಗಳನ್ನು ಬರೆದುಕೊಂಡಿರುವುದಾಗಿ ದೃಢೀಕರಿಸಲಾಗಿದೆ).

ದಿನಾಂಕಃ 16.07.2026

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಭದ್ರಾವತಿ

ಆರೋಪಿಯ ಸಹಿ